**<u>ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಪಾಟೀ ಸವಾಲು :- ಶ್ರೀಮತಿ ಟಿ ಕೆ ಸಿ ವಕೀಲರಿಂದ 2 ನೇ ಎದುರುದಾರರ ಪರವಾಗಿ</u>**

4. ನಾನು 8 ನೇ ತರಗತಿ ವಿದ್ಯಭ್ಯಾಸ ಮಾಡಿರುತ್ತೇನೆ. ನಾನು ಯಾರ ಸಹಾಯ ಇಲ್ಲದೇ ಈ ದಿನ ನ್ಯಾಯಾಲಯಕ್ಕೆ ಬಂದಿರುತ್ತೇನೆ. ನಾನು ನ್ಯಾಯಾಲಯಕ್ಕೆ ಸಲ್ಲಿಸಿರುವ ದಾಖಲಾತಿಗಳನ್ನು ತಿಳಿದುಕೊಂಡಿರುತ್ತೇನೆ. ಅವುಗಳನ್ನು ಹೊರೆತುಪಡಿಸಿ ಬೇರೆ ದಾಖಲಾತಿಗಳು ಇರುವುದಿಲ್ಲ. ಅಪಘಾತ ಸಮಯದಲ್ಲಿ ಕಾರನ್ನು ಅನಿಲ್ ಕುಮಾರ ಚಲಾಯಿಸುತ್ತಿದ. ಕಾರ್ ನನ್ನ ತಮ್ಮನಿಗೆ ಸೇರಿರುತ್ತದೆ. ಕಾರಿಗೆ ಸಂಬಂಧಿಸಿದ ದಾಖಲಾತಗಳನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿರುತ್ತೇನೆ. ನಾನು ಯಾವುದೇ ದಾಖಲಾತಿಗಳನುನ ಹಾಜರು ಪಡಿಸಿರುವುದಿಲ್ಲ ಎಂದರೆ ಸರಿಯಲ್ಲ.

5. ಕಾರ್ ಅಪಘಾತವಾದ ದಿನ ನಾನು, ನನ್ನ ಭಾವ ವಿರುಪಾಕ್ಷ ಹಾಗೂ ಚಾಲಕ ಪ್ರಯಾಣಿಸುತ್ತಿದ್ದೇವು. ನಾನು ಚಾಲಕನ ಪಕ್ಕ ಕುಳಿತುಕೊಂಡಿದೆ. ಅನಿಲ್ ಕುಮಾರ್ ಗೆ ಚಾಲನಾ ಪರವಾನಿಗೆ ಇರುತ್ತದೆ. ಅದನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿರುತ್ತೇನೆ. ನಾನು ದಾಖಲೆಯನ್ನು ಹಾಜರು ಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ನಾವು ಹೊಳಲ್ಕೆರೆ ಇಂದ ಚಿತ್ರದುರ್ಗಗೆ ಬರುತ್ತಿದ್ದೇವು. ಅಪಘಾತಕವು ಲಾರಿ ಚಾಲಕನ ತಪ್ಪಿನಿಂದ ಆಗಿರುವುದಿಲ್ಲ ಎಂದರೆ ಸರಿಯಲ್ಲ. ಪೋಲಿಸರಿಗೆ ನಾನು ಅಪಘಾತವದ ಬಗ್ಗೆ ಹೇಳಿಕೆ ನೀಡಿರುತ್ತೇನೆ.

6. ಮಣಿಪಾಲ್ ಆಸ್ಪತ್ರೆಯಲ್ಲಿ ನಾನು 11 ದಿನ ಒಳರೋಗಿಯಾಗಿ ಚಿಕಿತ್ಸೆ ಪಡೆದಿರುತ್ತೇನೆ. ನಾನು ವೈದ್ಯಕೀಯ ದಾಖಲಾತಿಗಳನ್ನು ಸೃಷ್ಟಿಸಿರುತ್ತೇನೆ ಎಂದರೆ ಸರಿಯಲ್ಲ. ರೂ.4,00,000/- ವೈದ್ಯಕೀಯ ಖರ್ಚು ಆಗಿರುತ್ತದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ವಾರ್ಷಿಕ ಆದಾಯ ತೋರಿಸುವ ದಾಖಲೆ ಹಾಜರು ಪಡಿಸಿರುತ್ತೇನೆ. ನಾನು ಯಾವುದೇ ದಾಖಲೆ ಹಾಜರು ಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ನನಗೆ ಅಪಘಾತದಲ್ಲಿ ಯಾವುದೇ ಅಂಗನ್ಯೂನ್ಯತೆ ಆಗಿರುವುದಿಲ್ಲ ಎಂದರೆ ಸರಿಯಲ್ಲ. ಲಾರಿ ಚಲಕನಿಗೆ ಅಪಘಾತದ ಸಮಯದಲ್ಲಿ ಚಾಲನಾ ಪರವಾನಿಗೆ ಇರಲಿಲ್ಲ ಆದ್ದರಿಂದ 2 ನೇ ಎದುರುದಾರ ಪರಿಹಾರ ನೀಡಲು ಭಾದ್ಯಸ್ಥ ನಿರುವುದಿಲ್ಲ ಎಂದರೆ ಸರಿಯಲ್ಲ. ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ತಕ್ಕಂತೆ ಬೆರಳಚ್ಚು ಮಾಡಿಸಲಾಯಿತು)
ಓ.ಹೇ.ಕೇ. ಸರಿ. ಇದೆ.

2 ನೇ ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಎ.ಎಂ.ಎ.ಸಿ.ಟಿ, ಚಿತ್ರದುರ್ಗ